# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಯಾದಗಿರಿ.
### ಎಸ್.ಸಿ. 12/2025

1. ಗುರುಮಠಕಲ್ ಪೊಲೀಸಠಾಣೆ ...ಫಿರ್ಯಾದಿ

ವಿರುದ್ಧ

1. ಅಬ್ದುಲ್‌ನಭೀ .....ಆರೋಪಿ

**ದೋಷಾರೋಪಣೆ**

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1. ಅಬ್ದುಲ್‌ನಭೀ ತಂದೆ ಬಾಬುಮಿಯಾ ಕೋತ್ವಾಲ್, ವಯಸ್ಸುಃ 30 ವರ್ಷ, ಆಟೋ ಚಾಲಕ, ಸಾಃ ಕಾಕಲವಾರ ತಾಃ ಗುರುಮಠಕಲ್ ಜಿಃ ಯಾದಗಿರಿ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಆರೋಪಿಯಾದ ನೀನು ಟ್ರ್ಯಾಕ್ಟರ ಚಲಾಯಿಸಿಕೊಂಡು ಚಾಸಾ-16 ರವರ ಮನೆಗೆ ಮತ್ತು ಜಮೀನಿಗೆ ಹೋಗಿ ಬರುವುದು ಮಾಡುತ್ತಿದ್ದು, ಆ ಮೂಲಕ ಚಾಸಾ-1 ರವರ ಪರಿಚಯವಾಗಿದ್ದು, ಅವರೊಂದಿಗೆ ಅನೈತಿಕ ಸಂಬಂಧ ಹೊಂದಿದ್ದು, ಅವರನ್ನು ಮದುವೆ ಮಾಡಿಕೊಂಡು ಹೈಧ್ರಾಬಾದಿಗೆ ಹೋಗಿ ಇರೋಣ ಎಂದು ಕೇಳಿದಾಗ, ನನ್ನ ಮಗ ನರೇಂದ್ರ ಇವನಿಗೆ ವಿಧ್ಯಾಭ್ಯಾಸ ಮಾಡಿಸಿಬೇಕು, ಪಾಲನೆ ಪೋಷಣೆ ಮಾಡಿಸಬೇಕು ಎಂದು ಕೋಪಗೊಂಡು ಮದುವೆ ಆಗೋದಿಲ್ಲ ಎಂದು ಹೇಳಿದ್ದು, ಅದಕ್ಕಾಗಿ ನರೇಂದ್ರನನ್ನು ಕೊಲೆ ಮಾಡಿದರೆ ಅವರನ್ನು ಮದುವೆ ಆಗಬಹುದು ಎಂಬ ಉದ್ದೇಶದಿಂದ ದಿಃ 30.09.2024 ರಂದು ಸಂಜೆ 08.15 ರ ಸುಮಾರು ಕಾಕಲವಾರ ಗ್ರಾಮದ ಚಾಸಾ-27 ರವರ ಮನೆಯ ದನಗಳು ಕಟ್ಟುವ ಕೊಟ್ಟಿಗೆ ಒಳಗಡೆ ನರೇಂದ್ರನನ್ನು ಕೊಲೆ ಮಾಡಬೇಕೆಂಬ ಉದ್ದೇಶದಿಂದ ಕರೆದುಕೊಂಡು ಹೋಗಿ ಕೈಗಳಿಂದ, ಬಾಯಿ, ಮೂಗು ಒತ್ತಿ ಹಿಡಿದು ಉಸಿರುಗಟ್ಟಿಸಿ ಸಾಯಿಸಿ ಕೊಲೆ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 103 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ **31.07.2025** ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಯಾದಗಿರಿ.